ಮೈಸೂರ ಗೆಜೆಟ್.

ನಂ. 18 ಸರ್ಕಾರದಿಂದ ಪಾಯಿಪ್ ಆದ್ದು. ಸ್ 1876.

ಬೆಂಗಳೂರು, ಶನಿವಾರ, ಮೇ ತಾ|| 6, ಸ್ 1876.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಪ್ರತ್ಯೇಕವಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

ಪುಟ

1ನೇ ಭಾಗ—ಮೈಸೂರು ವ ಕೊಡಗು ಶೀಮೆಗಳ ಚೀಫ್ ಕಮ್ಮಿಷನರವರ ಇಸ್ತಿಹಾರ್ ನಾಮೆಗಳು, ಇಂಡ್ಯ ಗವರ್ಮೆಂಟಿನವರ ಇಸ್ತಿಹಾರ್ ನಾಮೆಗಳು. .. .. 65—70

2ನೇ ಭಾಗ—ಜುಡಿಷಲ್ ಕಮ್ಮಿಷನರು, ಸರ್ವೇ ವ ಸೆಟಲ್‌ಮೆಂಟ್ ಕಮ್ಮಿಷನರು, ಇನಾಂ ಸೂಪರ್ಟಿಂಡೆಂಟರು, ಡೆಪ್ಯುಟಿ ಅಕ್ಕೌಂಟೆಂಟ್ ಜನರಲ್ಲವರು, ಮಣಿ ಆರ್ಡರ್ ಕಂಟ್ರೋಲರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮಿಲಿಟರಿ ಅಸಿಸ್ಟೆಂಟರು, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ವಿದ್ಯಾಶಾಲಿ ಡೈರೆಕ್ಟರು, ಫಾರೆಸ್ಟ್ ಕನ್‌ಸರ್‌ವೇಟರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿವಿಜ್ ಜಾತ್ ಕಮ್ಮಿಷನರುಗಳು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಪೊಲೀಸ್ ಸೂಪರ್ಟಿಂಡೆಂಟರು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್ಯಾಫಿಸ್ ನೋಟಿಸ್‌ಗಳು. .. .. 213—221

3ನೇ ಭಾಗ—ಇಂಡ್ಯ ಗವರ್ಮೆಂಟಿನ ಮಂತ್ರಾಲೋಚಕ ಸಭೆಯವರ ಆಕ್ಟ್ಗಳು. .. ..

4ನೇ ಭಾಗ—ಚಿಲ್ಲರೆ ವಿಷಯಗಳ ಕಾಗದ ಪತ್ರಗಳು.— .. ..

1ನೇ ಭಾಗ.

ಮೈಸೂರು ಚೀಫ್ ಕಮ್ಮಿಷನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್ ನಾಮೆಗಳು.

ತಾರೀಖು 28ನೇ ಏಪ್ರೆಲ್ 1876.

ನಂ. 24.

ಡಿಕ್ಲೆರೇರ್ಷ.—(ಲ್ಯಾಂಡ್ ಆಕ್ವಿಜಿರ್ಷಯಾನೆ ಜಮೀರ್ ಸಂಪಾದನೇ ವಿಷಯದ ಆಕ್ಟ್ಯಯೆಂಬ) 1870ನೇ ಇಸವಿ 1 ಆಕ್ಟಿನ 6ನೇ ಸೆಕ್ಷರ್ಷ ನಿಬಂಧನೆಗಳನುಸರಿಸಿ ಇದರಿಂದ ತಿಳಿಸಲ್ಪಡುವದೇನಂದರೆ,—ಈ ಕೆಳಗೆ ಕಂಡ ಪಟ್ಟ್ಯೇಯಲ್ಲಿ ನಮೂ ಜಮೀರ್‌ಗಳು ವ ಕಟ್ಟಣಗಳು ಲಷ್ಕರ್ ಮೊಹಲ್ಲಾದೊಳಗೆ ಗೋಧೀ ಗಡಂಗು ಬೀದಿಯನ್ನು ಅಗಲ ಪಡಿಸುವ ಬಗ್ಗೆ ಷಹರ್ ಮ್ಯುನಿಸಿಪಲ್ ಯಿಲಾಖೆಯವರಿಗೆ ಬೇಕಾಗಿರುತ್ತೆ.

ನಂಬರ್	ಹೊಬಳಿ	ಮೊಲೀಕರ ಹೆಸರು	ಜಮ್ಮಾ ವಿವರ	ಇರತಕ್ಕ ಸ್ಥಳ	ವಿಸ್ತೀರ್ಣ ಉ.	ಅ.	ಚ.	ಕಂದಾಯ.	ಸರಹದ್ದು.
1	ಜಿಗಣಿ ಹೊಬಳಿ	ಇಮ್ಮಾಮುದೀನ್ ಖಾನ್	ಮನೆಯಭಾಗ	ಗೋಧೀಗ ಡೆಂಗುಬೀದಿ	85	8	0	ಈ ಮನೆಗಳ ಭಾಗಗಳು ಬೇಕಾಗಿರುವದರಿಂದ ಇದರ ಕ್ರಯದ ಜೊತೆಗೆ ಮತ್ತೂ ಜೊಕರರಾದ ಕಂದಾಯದ ಜೊತೆಗೆ ಹೆಚ್ಚಿಗೆ ಯಿಸಿಕೊಳ್ಳಲಾಗುವದು.	ಪೂರ್ವಕ್ಕೆ —ದೋಂಜೋಜಿಮನೇ ದಕ್ಷಿಣಕ್ಕೆ, ಪಶ್ಚಿಮಕ್ಕೆ, ಉತ್ತರಕ್ಕೆ } ಪಬ್ಲಿಕ್‌ರಸ್ತೆಗಳು
2		ಪುಟ್ಟುಮಲ್ಲಯ್ಯಾ	ಡಿಟೋ	ಡಿಟೋ	35	8	0		ಪೂರ್ವ ಮತ್ತು ದಕ್ಷಿಣಕ್ಕೆ —ಪಬ್ಲಿಕ್ ರಸ್ತೆಗಳು ಪಶ್ಚಿಮಕ್ಕೆ —ಸುಬ್ಬರಾಜೇ ಅರಸರಬಂ ಗಿನೆ. ಉತ್ತರಕ್ಕೆ —ನೂರುದ್ದೀಮನೆ
3		ವೆಂಕಟಗಿರಿ ಗೋಸಾಯಿ	ಪಾಳುಜಮ್ಮಾ	ಡಿಟೋ	10	4	0		ದಕ್ಷಿಣಕ್ಕೆ —ಪಬ್ಲಿಕ ರಸ್ತೆ ಪಶ್ಚಿಮಕ್ಕೆ —ಡಿಟೋ ಗಲ್ಲಿ ಉತ್ತರಕ್ಕೆ —ವೆಂಕಟಶಾಮೀ ಮನೆ ಪೂರ್ವಕ್ಕೆ —ಮಾಲೀಕನ ಮನೆ
4		ತಿಮ್ಮಣ್ಣಾ	ಮನೆಯಭಾಗ	ಡಿಟೋ	24	3	0		ದಕ್ಷಿಣಕ್ಕೆ —ಪಬ್ಲಿಕ ರಸ್ತೆ ಪೂರ್ವಕ್ಕೆ —ಪುಟ್ಟಮ್ಮನ ಮನೆ ಪಶ್ಚಿಮಕ್ಕೆ —ವೆಂಕಟಗಿರಿ ಮನೆ ಉತ್ತರಕ್ಕೆ —ರಹಿವಾ ಖಾನನ ಮನೆ
5		ಬಿ. ಪುಟ್ಟಮ್ಮ	ಪೂರಾಮನೆ	ಡಿಟೋ	30	8	0	3 0 0	ಪೂರ್ವ ವ ದಕ್ಷಿಣಕ್ಕೆ —ಪಬ್ಲಿಕ ರಸ್ತೆ ಪಶ್ಚಿಮ ವಉತ್ತರಕ್ಕೆ ತಿಮ್ಮಮ್ಮನ ಮನೆ

ನಂ. 25.

ತಾರೀಖು 28ನೇ ಏಪ್ರೀಲ್ 1876.

ಮೆ॥ ರಿಕ್ಕೆಟ್ಸ್ ಸಾಹೆಬರು, ಬೆಂಗಳೂರು ಡಿಸ್ಟ್ರಿಕ್ಟ್ ಆಫಿಸ್ ಮೊಹರ್‌ಗಳು ವ ಖಜಾನೇ ಚಾರ್ಜನ್ನು 1876ನೇ ಏಪ್ರೆಲ್ 19ನೇ ಮುಕ್ತಂ ಪೂರ್ವಾನ್ಹದಲ್ಲಿ ಮೇಜರ್ ಲಿಂಡ್‌ಸೇ ಸಾಹೆಬರಿಗೆ ಬಪ್ಪಿಸಿದರು.

ನಂ. 26.

ತಾರೀಖು 28ನೇ ಏಪ್ರೆಲ್ 1876.

ಮೆ॥ ಸುಬ್ಬರಾಯರವರು ಹಾಸನ ಡಿಸ್ಟ್ರಿಕ್ಟ್ 1ನೇ ಅಸಿಸ್ಟೆಂಟ್ ಕಮ್ಮಿಷನರವರ ಕೋರ್ಟು ಚಾರ್ಜನ್ನು ಮೆ॥ ಶ್ರೀನಿವಾಸ ಯ್ಯಂಗಾರ್ರಿಗೆ 1876ನೇ ಏಪ್ರೆಲ್ 5ನೇ ಮುಕ್ತಂ ಮಧ್ಯಾನ್ಹಾತ್ಪರ ಬಪ್ಪಿಸಿದರು.

ಮೆ॥ ಶ್ರೀನಿವಾಸಯ್ಯಂಗಾರ್ರು, ಹಾಸನ ಡಿಸ್ಟ್ರಿಕ್ಟ್ 1ನೇ ಅಸಿಸ್ಟೆಂಟ್ ಕಮ್ಮಿಷನರ ಕೋರ್ಟು ಚಾರ್ಜನ್ನು ಮೆ॥ ನರಸಿಹ್ಮ ಯ್ಯಂಗಾರ್ರಿಗೆ 1876ನೇ ಏಪ್ರೆಲ್ 10ನೇ ಮುಕ್ತಂನಲ್ಲಿ ಬಪ್ಪಿಸಿದರು.

ತಾರೀಖು 28ನೇ ಏಪ್ರೀಲ್ 1876.

ಸೆಂಟ್ ಕಮ್ಮಿಷನರ್ ಮೆ॥ ಅಬ್ದುಲ್‌ಖಾದರ್‌ಯವರು ಚಿಕ್ಕಬಳ್ಳಾಪುರದ ಸಬ್‌ಡಿವಿಜ್ ಚಾರ್ಜನ್ನು 1876ನೇ ಏಪ್ರೆ ಮುಕ್ತಂ ಮಧ್ಯಾನ್ಹಾತ್ಪರ ವಹಿಸಿದರು.

ನಂ. 29. ತಾರೀಖು 2ನೇ ಮೇ 1876.

ಮೈಸೂರು ಗವರ್ಣಮೆಂಟ್ ಪ್ರೆಸ್ ಸೂಪ್ರಿಟೆಂಡೆಂಟ್ ವ ಮೈಸೂರು ಗೆಜೆಟ್ ಕಂಪೈಲರ್ ಮೆಸ್ಟರ್ ಗ್ಯಾರಟಿಸಾಹೆಬರವರಿಗೆ 1876ನೇ ಇಸವಿ ಏಪ್ರೆಲ್ 26ನೇ ತಾರೀಖು ಲಾಗಾಯಿತು 27ನೇ ತಾರೀಕ್‌ವರಿಗೂ ಸಬ್‌ಸಿಡಿಯೇರಿ ರಜಾ ಕೊಡಲ್ಪಟ್ಟಿರುತ್ತೆ.

ನಂ. 30. ತಾರೀಖು 2ನೇ ಮೇ 1876.

ಮೆಸ್ಟರ್ ಗ್ಯಾರಟಿಸಾಹೆಬರವರು ಮೈಸೂರು ಗವರ್ಣಮೆಂಟ್ ಪ್ರೆಸ್ ವ ಮೈಸೂರು ಗೆಜೆಟ್ ಕಂಪೈಲರ್ ಈ ಆಫಿಸ್‌ಗಳ ಚಾರ್ಜನ್ನು ಮೆಸ್ಟರ್ ಯಕ್ಕಿಲ್‌ಸ್‌ಯವರಿಂದ 1876ನೇ ಇಸವಿ ಏಪ್ರೆಲ್ 28ನೇ ಮಧ್ಯಾಹ್ನಂ ಮಧ್ಯಾನ್ಹಕ್ಕೆ ಪೂರ್ವ ತೆಗದುಕ್ಕೊಂಡರು.

ನಂ. 31. ತಾರೀಖು 2ನೇ ಮೇ 1876.

ಸಾಲ್‌ಮಜಕೂರು ಜಿಸ್ತುಗಳು ಪ್ರಾರಂಭವಾಗುವದಕ್ಕೆ ಮುಂಚೆ ಸಾಲ್‌ಗುಜಸ್ತಾ ಬಾಕಿ ವಸೂಲ್ ಮಾಡಿದ ನಂದೀದುರ್ಗ ಡಿವಿಜ಼ಿ ಯಿದರಡಿ ನಮೂದಿಸಲ್ಪಡುವ ಅಮಲ್‌ದಾರ್ರುಗಳ ಹೆಸರುಗಳನ್ನು ಫಾಯಿಷ್ ಮಾಡುವಂತೆ ಅಪ್ಪಣೆ ಕೊಡತಕ್ಕ ವಿಷಯು ದಲ್ಲಿಆಫಿಷಿಯೇಟಿಂಗ್ ಚೀಫ್ ಕಮ್ಮಿಷನರ್ ಸಾಹೆಬರವರು ಬಹಳ ಸಂತೋಷಉಳ್ಳವರಾಗಿದ್ದಾರೆ.

ಕೋಲಾರ ಡಿಸ್ಟ್ರಿಕ್ಟು.

ಹೆಸರು.		ತಾಲ್ಲೂಕು
ವೆಂಕಟರಾವ್	.. ..	ಕೋಲಾರ
ಕೃಷ್ಣರಾವ್	.. ..	ಶ್ರೀನಿವಾಸಪುರ
ವೆಂಕಟರಮಣಯ್ಯ	.. ..	ಬಿಡ್ಲಘಟ್ಟ
ಗೋವಿಂದರಾವ್	(ಆಕ್ಟಿಂಗ್)	ಚಿಕ್ಕಬಳ್ಳಾಪುರ
ಅಂಣಾಜಯ್ಯಂಗಾರ್	(ಆಕ್ಟಿಂಗ್)	ಮಾಲೂರು
ವೆಂಕಟನಾರಣಪ್ಪ	.. ..	ಗುಮ್ಮನಾಯಕನಪಾಳ್ಯ
ರಾಮಾನುಜಯ್ಯಂಗಾರ್ರು	.. ..	ಗೋಡೀಬಿದನೂರು

ತುಮಕೂರು ಡಿಸ್ಟ್ರಿಕ್ಟು.

ಗುಂಡಪ್ಪ	.. ..	ತುಮಕೂರು
ಆಂಣೈಯ	.. ..	ಕೊರ್ಟಿಗೆರೆ

ನಂ. 32. ತಾರೀಖು 2ನೇ ಮೇ 1876.

ಆಫಿಷಿಯೇಟಿಂಗ್ ಡೆಪ್ಯೂಟಿ ಕಮ್ಮಿಷನರ್ ಮೇಜರ್ ಬ್ಲೇರ್ ಸಾಹೆಬರು, ಶಿವಮೊಗ್ಗಾ ಡಿಸ್ಟ್ರಿಕ್ಟು ವ ಟ್ರೆಜರಿ ಚಾರ್ಜನ್ನು ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕನಿಂಗ್‌ಹ್ಯಾಂ ಸಾಹೆಬರಿಗೆ 1876ನೇ ಇಸವಿ ಏಪ್ರಲ್ 19ನೇ ಮಧ್ಯಾಹ್ನಂ ಮಧ್ಯಾನ್ಹಕ್ಕೆ ಪೂರ್ವ ಕೊಟ್ಟರು.

ನಂ. 33. ತಾರೀಖು 4ನೇ ಮೇ 1876.

ಸರ್ಜ್ ಮೆಗ್ಗಾ ಸಾಹೆಬರು ಶಿವಮೊಗ್ಗಾ ಮೆಡಿಕೆಲ್ ಸ್ಟೋರೀ ಚಾರ್ಜನ್ನು ಫಸ್ಟ್‌ಕ್ಲಾಸ್ ಅಸಿಸ್ಟೆಂಟ್ ಅಪಾಥಿಕೆರಿ ಬಾವಿಯವರಿಗೆ 1876ನೇ ಇಸವಿ ಏಪ್ರೆಲ್ 20ನೇ ಮಧ್ಯಾಹ್ನಂ ಮಧ್ಯಾನ್ಹಕ್ಕೆ ಪೂರ್ವ ಕೊಟ್ಟರು.

ನಂ. 34. ತಾರೀಖು 4ನೇ ಮೇ 1876.

ಸರ್ಜ್ ಮೇಜರ್ ಹೆಂಡರಸ್ ಸಾಹೆಬರು ಬೆಂಗಳೂರು ಸೆಂಟ್ರಲ್ ಜೆಯಿಲ್ ಚಾರ್ಜನ್ನು ಸರ್ಜ್ ಮೆಗ್ಗಾ ಸಾಹೆಬರಿಗೆ 1876ನೇ ಇಸವಿ ಏಪ್ರೆಲ್ 25ನೇ ಮಧ್ಯಾಹ್ನಂ ಮಧ್ಯಾನ್ಹಕ್ಕೆ ಪೂರ್ವ ಕೊಟ್ಟರು.

ನಂ. 35. ತಾರೀಖು 4ನೇ ಮೇ 1876.

ಮದರಾಸ್ ಮೆಡಿಕೆಲ್ ಸಿಬ್ಬಂದಿಗೆ ಸೇರಿದ ಮತ್ತು ನಗರ ಡಿವಿಜ್ಯ ಆಫಿಸಿಯೇಟಿಂಗ್ ಸಿವಿಲ್ ಸರ್ಜ್ಯ ಆಗಿರುವ ಡಾಕ್ಟರ್ ಬ್ಯೆರ್ಸ್ ಸಾಹೆಬರು ಶಿವಮೊಗ್ಗೆಯಲ್ಲಿ ಜೆಯಿಲ್ ಜಾರ್ಜ್ ಸಹಾ ವುಂಟುಗಿರತಕ್ಕ ದ್ದು.

"ಬಮೋಜೀಬ್ ಹುಕ್ಕುಂ,"

J. S. F. MACKENZIE,
Offg. Secretary.

ಇಂಡ್ಯಗವರ್ಮೆಂಟಿನವರವಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಹೋಂ ಡಿಪಾರ್ಟ್‌ಮೆಂಟ್.

ಇಸ್ತಿಹಾರ್ ನಾಮೆಗಳು.

ಪಬ್ಲಿಕ್.

ಫೋರ್ಟ್ ವಿಲಿಯಂ, ತಾರೀಖು 12ನೇ ಏಪ್ರಿಲ್ 1876.

ನಂ. 713—1860ನೇ ಇಸವಿ 31ನೇ ನಂಬರ್ ಆಕ್ಟಿನ 22ನೇ ಸೆಕ್ಷರ್ಷ ದೆಶೆಯಿಂದ ವುಂಟುಮಾಡಲ್ಪಟ್ಟ ಅಧಿಕಾರ ಅನುಸರಿಸಿ ಮಂತ್ರಾಲೋಚಕ ಸಭೆಯೊಳಗಣ ಗವರ್ನ ಜನರಲ್ ಸಾಹೆಬರವರು, ಸದರೀ ವಿಷಯದೊಳಗೆ ಹುಟ್ಟಿದ ಹಿಂದಿನ ದರೋಬಸ್ತು ಹುಕ್ಕುಂಗಳನ್ನೂ ರದ್ದುಪಡಿಸಿ, ಬಂದೂಕ್ ವಗೈರೇ ಆಯುಧಗಳನ್ನೂ, ಆಯುಧಗಳ ಭಾಗಗಳನ್ನೂ, ಮಿಲಿಟೇರಿ ಸ್ಟೋರ್ಸ್ ಎಂಬ ಸೈನಿಕ ಸಾಮಾನುಗಳನ್ನೂ, ಶೀಸ, ಗಂಧಕ, ಬಾರೂದ್, ಮತ್ತು ಗುಂಡುಗಳು ವಗೈರೇ ಇತರ ಸಾಮಗ್ರಿಗಳನ್ನೂ, ಬ್ರಿಟಿಷ್ ಇಂಡ್ಯೆದಲ್ಲಿ ಬಂದು.ಸ್ಥಳ ಗವರ್ಮೆಂಟಿನ ಯಾ ಅಡ್‌ಮಿನಿಸ್ಟ್ರೇಷನಿನ ಅಧಿಕಾರ ಸರಹದ್ದಿನೊಳಗೆ ಇರುವ, ಯಾವ ಸ್ಥಳದಿಂದಲಾಗಲಿ, ಬ್ರಿಟಿಷ್ ಇಂಡ್ಯೆದೊಳಗೆ ಮತ್ತೊಂದು ಸ್ಥಳ ಗವರ್ಮೆಂಟಿನ ಯಾ ಅಡ್‌ಮಿನಿಸ್ಟ್ರೇಷನಿನ ಅಧಿಕಾರ ಸರಹದ್ದಿನೊಳಗೆ ಇರುವ ಯಾವ ಸ್ಥಳಕ್ಕಾಗಲಿ ರವಾನೇಯಾಗತಕ್ಕ ದ್ದನ್ನು, ಈ ಕೆಳಗೆ ನಮೂದಿಸುವ ರೂಲ್ಸು ಮತ್ತು ಷರತ್‌ಗಳನ್ನು ಅನುಸರಿಸಿ ಹೊರತು ಅನ್ಯೆಥಾ, ನಿಷೇಧಿಸಿ ಇರುತ್ತಾರೆ.

2. ಮೇಲೆ ಕಂಡ ಸಾಮಗ್ರಿಗಳ ಪೈಕಿ ಯಾವದನ್ನಾಗಲಿ ತನ್ನ ಸ್ವಂತ ಉಪಯೋಗಕ್ಕೊಸ್ಕರ ಯುಕ್ತವಾದ ಪರಿಮಾಣದಲ್ಲಿ ಹೊರತು ಅನ್ಯಥಾ ಲೈಸೆನ್ಸ್ ಅನುಸರಿಸಿದ ಆಯುಧಗಳು ಆಮದ್ ಆಗಬಹುದಾಗಿರುವ ಸಮುದ್ರತೀರ ಪಟ್ಟಣಗಳು ಯಾ ಸರಹದ್ದು ಸ್ಟೇಷರ್ಷಗಳು ಇವುಗಳ ಪೈಕಿ ಯಾವದರಿಂದಾಗಲಿ, ಯಾವದರ ಸರಹದ್ದಿನೊಳಗೆ ಅಂತಾ ಸಮುದ್ರತೀರ ಪಟ್ಟಣ ಯಾ ಸ್ಟೇಷರ್ಷ ಇರುತ್ತೋ ಅಂತಾ ಲೋಕಲ್ ಗವರ್ಮೆಂಟಿನ ಯಾ ಅಡ್‌ಮಿನಿಸ್ಟ್ರೇಷನಿನ ಸ್ಥಳ ಸರಹದ್ದಿಗೆ ಆಚೆಗೆ ಇರುವ ಬ್ರಿಟಿಷ್ ಇಂಡ್ಯೆದ ಬಳಕೇಮೆಗೆ ಸಾಗಿಸುವದಕ್ಕೆ ಅಪೇಕ್ಷಿಸುವ ಯಾವ ಮನುಷ್ಯನಾಗಲಿ, ಸಮುದ್ರತೀರ ಯಾ ಸ್ಟೇಷನಿಗೆ ಆಮದಿ ಮಾಡುವ ಬಗ್ಯೆ, 1860ನೇ ಇಸವಿ 31ನೇ ನಂಬರ್ ಲಕ್ಟಿನ 17ನೇ ಸೆಕ್ಷರ್ಷ ಅನುಸರಿಸಿ ಲೈಸೆನ್ಸ್ ಕೊಡಲಿಕ್ಕೆ ಇಂಡ್ಯಗವರ್ಮೆಂಟಿನವರಿಂದ ಅಧಿಕಾರ ಕೊಡಲ್ಪಟ್ಟ ಆಫಿಸರಿಗೆ ಪ್ಯಾಸ್ ಎಂಬ ರಹದಾರೀ ಬಗ್ಯೆ ಬರದುಕ್ಕೊಳ್ಳತಕ್ಕ ದ್ದು.

3. ಮೇಲಿನ ಕಡೇ ರೂಲಿನಲ್ಲಿ ಕಂಡ ಸಮುದ್ರ ತೀರ ಪಟ್ಟಣಗಳು ಯಾ ಸ್ಟೇಷರ್ಷಗಳು ಅಲ್ಲದೆ ಬ್ರಿಟಿಷ್ ಇಂಡ್ಯೆದೊಳಗೆ ಇರುವ ಬೇರೆ ಯಾವದಾದರೂ ಸ್ಥಳದಿಂದ, ಬ್ರಿಟಿಷ್ ಇಂಡ್ಯೆದೊಳಗೆ ಮತ್ತೊಂದು ಸ್ಥಳ ಗವರ್ಮೆಂಟ್ ಯಾ ಅಡ್‌ಮಿನಿಸ್ಟ್ರೇಷನಿನ ರಾಜ್ಯಗಳಲ್ಲಿ ಯ ಯಾವಸ್ಥಳಕ್ಕಾಗಲಿ ಅಂತಾ ಯಾವ ಪದಾರ್ಥಗಳನ್ನಾದರೂ, ಕಳುಹಿಸುವದಕ್ಕೆ ಬಬ್ಬ ಮನುಷ್ಯನು ಅಪೇಕ್ಷಿಸುವ ಪಕ್ಷಕ್ಕೆ ಅಂತಾಮನುಷ್ಯನು, ಹೋಂಡಿಪಾರ್ಟ್‌ಮೆಂಟಿನಲ್ಲಿ ಇಂಡ್ಯ ಗವರ್ಮೆಂಟ್ ಸೆಕರೆಟೆರಿಯವರಿಗೆ, ಅಥವಾ ಸದರೀ ಸಾಮಾನುಗಳನ್ನು ಯಾವ ಕೀವೆಯಿಂದ ಹೊರಗೆ ತೆಗದುಕ್ಕೊಂಡು ಹೋಗಲಿಕ್ಕೆ ಖಾಯಿಷ್‌ಮಾಡುತ್ತಾನೋ ಅಂತಾ ರಾಜ್ಯದ ಸ್ಥಳ ಗವರ್ಮೆಂಟ್ ಸೆಕರೆಟೆರಿಗೆ, ಅಥವಾ ಸದರೀ ಸಾಮಗ್ರಿಗಳನ್ನು ಯಾವ ಡಿಸ್ಟ್ರಿಕ್ಟಿನಿಂದ ಹೊರಗೆ ತೆಗದುಕ್ಕೊಂಡು ಹೋಗಲಿಕ್ಕೆ ಅಪೇಕ್ಷಿಸುತ್ತಾನೋ ಅಂತಾ ಡಿಸ್ಟ್ರಿಕ್ಟಿನ ಮಾಜಿಸ್ಟ್ರೇಟರಿಗೆ, ಯಾ ಡೆಪ್ಯುಟಿ ಕಮ್ಮಿಷನರಿಗೆ ಯಾ ಇತರ ಮುಖ್ಯ ಕಾರ್‌ಬಾರೀ ಆಫಿಸರರಿಗೆ, ಅಥವಾ ಅಂತಾ ರಹದಾರೀಯನ್ನು ಕೊಡಲಿಕ್ಕೆ ಇಸ್ತಿಹಾರ್ ಮೂಲಕ ಇಂಡ್ಯ ಗವರ್ಮೆಂಟಿನವರಿಂದ ಅಧಿಕಾರ ಕೊಡಲ್ಪಟ್ಟ ಇತರ ಆಫಿಸರರಿಗೆ ರಹದಾರೀಬಗ್ಯೆ ಬರದುಕ್ಕೊಳ್ಳತಕ್ಕ ದ್ದು.